Indian Journal of History and Archaeology

ISSN (E):2582-225X
VOL-2, ISSUE -2, JULY-AUGUEST, 2020, 18-23

# ಚಾಮರಾಜನಗರ ಜಿಲ್ಲೆಯ ಶಾಸನಗಳಲ್ಲಿ ಮೈಸೂರು ಒಡೆಯರ ಕಾಲದ ಆರ್ಥಿಕ ಪರಿಸ್ಥಿತಿ

**ಡಾ. ಹೆಚ್.ಎನ್. ಕಾಳಸ್ವಾಮಿ**

**ಡಾ.ಹೆಚ್.ಎನ್.ಕಾಳಸ್ವಾಮಿ**
ಯು.ಜಿ.ಸಿ ಪೋಸ್ಟ್ ಡಾಕ್ಟರಲ್ ಫೆಲೊ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

ಯಾವುದೇ ಪ್ರದೇಶದ ಆರ್ಥಿಕ ಪರಿಸ್ಥಿತಿ ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳುವ ಅಲ್ಲಿನ ಜನರ ದುಡಿಮೆಯ ಪರಿಶ್ರಮವು ಗಣನೀಯವಾಗಿರುತ್ತದೆ. ಆದ್ದರಿಂದ ಒಂದು ನಾಡಿನ ಅಥವಾ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಮತ್ತು ಅಭಿವೃದ್ಧಿಯ ನೈಸರ್ಗಿಕ ಸಂಪನ್ಮೂಲಗಳ ಪ್ರಮಾಣ, ಅವುಗಳ ಗುಣಮಟ್ಟ ಹಾಗೂ ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯಗಳಗನುಗುಣವಾಗಿ ನಿರ್ಧರಿತವಾಗುತ್ತದೆ.

ಭಾರತ ದೇಶವು ಪ್ರಾಚೀನ ಕಾಲದಿಂದಲೂ ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆಯನ್ನು ಹೊಂದಿದ್ದು ಇಂದಿಗೂ ಸಹ ಕಾಣಬಹುದು. ಅಂದರೆ ಕೇವಲ ನದಿ ತೀರಗಳಿಗೆ ಮಾತ್ರ ಸೀಮಿತವಾಗಿದ್ದ ಕೃಷಿ ವ್ಯವಸ್ಥೆಯು ಜನಸಂಖ್ಯೆ ಹೆಚ್ಚಾದಂತೆ ಕಾಡನ್ನು ನಾಶಮಾಡಿ ವ್ಯವಸಾಯದ ಚಟವಟಿಕೆಯನ್ನು ವಿಸ್ತರಿಸಿರುವುದನ್ನು ಕಾಣಬಹುದು. ಕೆಲವೊಮ್ಮೆ ವರ್ಣ, ಜಾತಿಯಾಧಾರದ ಮೇಲೆ ವಾರ್ಷಿಕ ತೆರಿಗೆ ಮತ್ತು ವಿನಾಯಿತಿಯ ಮೇಲೆ ರಾಜರು ಭೂಮಿಯನ್ನು ದಾನ ನೀಡುತ್ತ ಬಂದಿದ್ದಾರೆ. ಇದರಿಂದ ಕೃಷಿ ಚಟುವಟಿಕೆ ಬಲವಾಗುತ್ತ ಬಂದಿದೆ. ಜೊತೆಗೆ ಉಪಕಸುಬಾದ ಪಶು ಸಂಗೋಪನೆಯು ಕೂಡ ಪ್ರಮುಖ ಆದಾಯದ ಮೂಲಗಳಾಗಿದ್ದವು. ಈ ಹಿನ್ನೆಲೆಯಿಂದ ಪ್ರಸ್ತುತ ಚಾಮರಾಜನಗರ ಜಿಲ್ಲೆಯಲ್ಲಿ ಕಂಡುಬರುವ ಶಾಸನಗಳಲ್ಲಿ ವ್ಯವಸಾಯ, ಬೆಳೆಗಳು, ನೀರಾವರಿ ವ್ಯವಸ್ಥೆ, ತೆರಿಗೆ ಅಳತೆಗಳು ಮತ್ತು ತೂಕ, ವರ್ತಕ ಸಂಘಗಳು, ವ್ಯಾಪಾರ ಇವುಗಳ ಬಗ್ಗೆ ಉಲ್ಲೇಖವಿದ್ದು, ಇವುಗಳನ್ನು ಈ ಕೆಳಕಂಡಂತೆ ತಿಳಿಯಬಹುದಾಗಿದೆ.

ಸತ್ಯಗಾಲದ ಕ್ರಿ.ಶ.1720ರ ಶಾಸನವು ಮೈಸೂರು ಒಡೆಯ ಕೃಷ್ಣರಾಜ ಒಡೆಯರ ಆಡಳಿತದಲ್ಲಿ ಯಳಂದೂರು ಪ್ರಭುವಾದ ಲಿಂಗರಾಜ ಒಡೆಯನ ಮಗ ಚಾಮರಾಜ ಒಡೆಯರು ದೇವಾಲಯ ನಿರ್ಮಿಸಿ ಪಂಚಲಿಂಗವನ್ನು ಸ್ಥಾಪಿಸಿ, ದೇವರ ಪೂಜೆ ಮತ್ತು ನೈವೇದ್ಯಕ್ಕೆಂದು ಅರ್ಚಕನಿಗೆ ಭೂಮಿಯನ್ನು ದಾನ ಮಾಡಿದ್ದಾನೆ ಎಂದು ತಿಳಿಸುತ್ತದೆ. ಬಂಡಳ್ಳಿಯ ಕ್ರಿ.ಶ.1845–46ರ ಶಾಸನದಲ್ಲಿ ಚೋಳರ ಕಾಲದಲ್ಲಿ ನಿರ್ಮಿತನಾಗಿದ್ದ ಉಮಾಮಹೇಶ್ವರಿ ದೇವಾಲಯ ಮತ್ತು ವೀರಭದ್ರ ದೇವಸ್ಥಾನಗಳು ಹಾಗೂ ದೇವಾಲಯದ ಮಜ್ಜನಕ್ಕೆಂದು ಇದ್ದ ಬಾವಿಯು ಶಿಥಿಲವಾಗಿದ್ದರಿಂದ ಅದನ್ನು ಸಂಗಯ್ಯನ ಮಗ ಸಿಂಗೆಶೆಟ್ಟಿಯು ಜೀರ್ಣೋದ್ಧಾರ ಮಾಡಿಸಿದನೆಂದು ಉಲ್ಲೇಖವಿದೆ. ಮುಡಿಗೊಂಡ ಕ್ರಿ.ಶ.1666ರ ಶಾಸನ ಹೊಂಡರಬಾಳು ಸಿಂಹಾಸನಕ್ಕೆ ಶಿವರಾತ್ರಿ ಹಬ್ಬದಲ್ಲಿ ವಸ್ತ್ರ ಧರಿಸಲು ವಿಜಯಪುರದ ಪರಮ ಒಡೆಯರು ಹಾಗೂ ಅವರ ಮಕ್ಕಳು ಮತ್ತು ಅವರ ಹೆಂಡತಿ ಚಿನ್ನಮ್ಮನವರು ಹಣವನ್ನು ದಾನ ಮಾಡಿದ್ದಾರೆ. ತಳ್ಳನೂರಿನ ಕ್ರಿ.ಶ.16–17ನೇ ಶತಮಾನದ ಶಾಸನ, ಮುಡಿಗೊಂಡದ ಕ್ರಿ.ಶ.1666ರ ಶಾಸನಗಳಲ್ಲಿ ಗದ್ಯಾಣವನ್ನು ದೇವಾಲಯಗಳಿಗೆ ಮತ್ತು ವ್ಯಕ್ತಿಗೆ ದಾನ ನೀಡಿರುವ ವಿಷಯವಿದೆ. ಅಗರದ ಕ್ರಿ.ಶ.1763ರ ತಾಮ್ರಶಾಸನವು ಶಿವನ ಸ್ತುತಿಯೊಂದಿಗೆ ಪ್ರಾರಂಭವಾಗಿ ಮೈಸೂರು ಒಡೆಯರಾದ ಶ್ರೀಕೃಷ್ಣರಾಜ ಒಡೆಯರ ಆಜ್ಞೆಯ ಮೇರೆಗೆ ಕೊಳ್ಳೇಗಾಲದ ವ್ಯಾಪಾರಿ ವೀರಶೆಟ್ಟಿಯ ಮುಖಾಂತರ ಮುತಾಲಿಕ ವೆಂಕಟರಾಮಯ್ಯನವರಿಗೆ ಭೂಮಿಯನ್ನು ಕ್ರಯ ನೀಡಿದ ಸಂಗತಿಯನ್ನು ನಿರೂಪಿಸುತ್ತದೆ. ಬಿಳಿಗಿರಿರಂಗನಬೆಟ್ಟ ಕ್ರಿ.ಶ.1667ರ ಶಾಸನವು ಹದಿನಾಡು ಪ್ರಭುವಾದ ತಿರುಮಲೆ ರಾಜನಾಯಕರ ಮಗನಾದ ಮುದ್ದರಾಜಯ್ಯನವರು ಬಿಳಿಕಲ ತಿರುವೆಂಗಳಸ್ವಾಮಿ ಅಂದರೆ ಬಿಳಿಗಿರಿರಂಗನಾಥಸ್ವಾಮಿಯ ಮಹಾನವಮಿ ನವರಾತ್ರಿಗೆ 30 ವರಹಗಳನ್ನು ದಾನ ನೀಡಿದ್ದಾನೆ. ಯಳಂದೂರಿನ ಕ್ರಿ.ಶ.1654–55ರ ಶಾಸನವು ಗದ್ದೆಯನ್ನು ಗೌರೀಶ್ವರ ದೇವಾಲಯಕ್ಕೆ ದಾನ ಮಾಡಿರುವ ವಿಷಯವನ್ನು ಹಾಗೂ ಸಮಾಜದ ಹಲವು ವರ್ಗದವರಿಗೆ ಭೂಮಿಯನ್ನು ಖಂಡುಗ ರೂಪದಲ್ಲಿ ದಾನ ಮಾಡಲಾಗಿದೆ. ಯಳಂದೂರು ಕ್ರಿ.ಶ.17ನೇ ಶತಮಾನದ ಶಾಸನ, ಯಳಂದೂರಿನ ಕ್ರಿ.ಶ.1775ರ ಕಾರೇಪುರ ಮಠದ ತಾಮ್ರ ಶಾಸನ, ಕ್ರಿ.ಶ.1692ರ ಮಲ್ಲಗನಹಳ್ಳಿ ಶಾಸನವು ಸೋಮಶಿವಾಚಾರ್ಯರ ಶಿಷ್ಯ ಚನ್ನರಾಜದೇವರು ಒಂದ ಮಠವನ್ನು ಕಟ್ಟಿಸಿ ಚರಂತಿಗಳ ದಾಸೋಹಕ್ಕೆ ಗದ್ದೆಯನ್ನು ದಾನ ಮಾಡಿರುವ ವಿಷಯವನ್ನು ತಿಳಿಸುತ್ತದೆ. ಹೊಸೂರು ಕ್ರಿ.ಶ.1640ರ ಶಾಸನವು ಶ್ರೀ ಹನುಮಾನ್ ದೇವರನ್ನು ಪ್ರತಿಷ್ಠಾಪಿಸಿ ದೇವರ ನೈವೇದ್ಯ, ಪೂಜೆಗೆ 5 ಕೊಳಗ ಗದ್ದೆಯನ್ನು ದಾನ ನೀಡಿರುವ ಬಗ್ಗೆ ಶಾಸನವು ಉಲ್ಲೇಖಿಸುತ್ತದೆ. ಅಗರ ಕ್ರಿ.ಶ.15–16ನೆಯ ಶತಮಾನದ ಶಾಸನವು ಉಮ್ಮತ್ತೂರಿನ ಪಾಳೆಗಾರನಾದ ನಂಜರಾಯ ಒಡೆಯರು ಕಿಂನಾಲಿಯ ಗ್ರಾಮದ ಬಸವಣ್ಣ ಒಡೆಯರಿಗೆ 30 ಕೊಳಗ ಗದ್ದೆಯನ್ನು ದಾನ ಮಾಡಿರುವ ಬಗ್ಗೆ ಶಾಸನವು ಉಲ್ಲೇಖಿಸುತ್ತದೆ. ಯೆರಿಯೂರು ಕ್ರಿ.ಶ.16–

17ನೇ ಶತಮಾನದ ಶಾಸನವು ಮನೆಯನ್ನು 180 ಗದ್ಯಾಣಗಳಿಗೆ ಕ್ರಯ ಮಾಡುವ ವಿಷಯ ತಿಳಿಸುತ್ತದೆ. ಅಗರ ಕ್ರಿ.ಶ.1763ರ ಶಾಸನವು ಕೊಳ್ಳೇಗಾಲದ ವ್ಯಾಪಾರಿ ವೀರಸೆಟ್ಟಿಯ ಮುಖಾಂತರ ಮುತಾಲಿಕ ವೆಂಕಟರಾಮಯ್ಯ ಭೂಮಿಯನ್ನು ಕ್ರಯ ನೀಡಿದ್ದಕ್ಕೆ ವೀರಸೆಟ್ಟಿಯ ಮುಖಾಂತರ 426 ವರಹ 7 ಹಣಕ್ಕೆ ಕ್ರಯ ಮಾಡಿರುವ ಬಗ್ಗೆ ಶಾಸನವು ತಿಳಿಸುತ್ತದೆ. ಯೆರಗಂಬಳ್ಳಿ ಕ್ರಿ.ಶ.16ನೇ ಶತಮಾನದ ಶಾಸನವು 20 ಹೊನ್ನಿಗೆ ಪರಿದೇವಯರ ಗದ್ದೆಯನ್ನು ಲಿಂಗ ಒಡೆಯರು ಕೊಂಡುಕೊಟ್ಟರೆಂದು ಶಾಸನವು ಉಲ್ಲೇಖಿಸುತ್ತದೆ. ಬೆಳಗಿರಿರಂಗನಬೆಟ್ಟ ಕ್ರಿ.ಶ.1667ರ ಶಾಸನವು ಹದಿನಾಡ ಪ್ರಭುವಾದ ತಿರುಮಲೆ ರಾಜನಾಯಕರ ಮಗನಾದ ಮುದ್ದರಾಜಯ್ಯನವರು ಬಿಳಿಗಿರಿರಂಗನಾಥಸ್ವಾಮಿಯ ಮಹಾನವಮಿ ನವರಾತ್ರಿಗೆ 30 ವರಹಗಳನ್ನು ದಾನ ನೀಡಿದ್ದಾರೆ. ಆ 30 ವರಹದ ಹಣದಿಂದ ಬಂದ ಬಡ್ಡಿಯಲ್ಲಿ ಮಹಾನವಮಿಯ ಹತ್ತುದಿನದ ಸೇವೆಯನ್ನು ನಡೆಸಿಕೊಂಡು ಬರುವುದೆಂದು ಶಾಸನವು ತಿಳಿಸುತ್ತದೆ. ಯಳಂದೂರು ಕ್ರಿ.ಶ.1654-55ರ ಶಾಸನದಲ್ಲಿ ದರ್ಪಣದವರಿಗೆ 1 ಖಂಡುಗ, ಸೀರುಗಿಯವರಿಗೆ 1 ಖಂಡುಗ, ಗುಂಬಾರತಿಯವರಿಗೆ 1 ಖಂಡುಗ, ಮಂಗಳಾರತಿಯವರಿಗೆ 2 ಖಂಡುಗ, ಮಂಗಳಷ್ಟಕದವರಿಗೆ 1 ಖಂಡುಗ, ನರ್ತನದವರಿಗೆ 1 ಖಂಡುಗ, ಮೇಳದ ಸೇರುವಗಾರನಿಗೆ 1 ಖಂಡುಗ, ಚವರದವರಿಗೆ 1 ಖಂಡುಗ, ಗಾರೆಯವರಿಗೆ 1 ಖಂಡುಗ, ಹೂವಾಡಿಗನಿಗೆ 1 ಖಂಡುಗ, ಸೋಮವಾರ-ಶುಕ್ರವಾರ ಧರ್ನುಮಾಸಗಳಲ್ಲಿ ವಿಶೇಷ ನೈವೇದ್ಯಕ್ಕೆ 2 ಖಂಡುಗ, ಅಮ್ಮನವರ ನೈವೇದ್ಯಕ್ಕೆ 1 ಖಂಡುಗ ಎಂದು ಶಾಸನವು ಉಲ್ಲೇಖಿಸುತ್ತದೆ. ಮಲ್ಲಗನಹಳ್ಳಿ ಕ್ರಿ.ಶ.1692ರ ಶಾಸನವು ಚನ್ನರಾಜದೇವರು ಮಠವನ್ನು ಕಟ್ಟಿಸಿ ಚಹತಿಗಳ ದಾಸೋಹಕ್ಕೆ 10 ಖಂಡುಗ ಗದ್ದೆಯನ್ನು ದಾನ ಮಾಡಿರುವ ಬಗ್ಗೆ ಶಾಸನವು ತಿಳಿಸುತ್ತದೆ. ಯಳಂದೂರು ಕ್ರಿ.ಶ.1654-55ರ ಶಾಸನವು 1 ಕೊಳಗ, ಭೂಮಿ 100ಕ್ಕೆ 1 ಕೊಳಗ ಎಂದು ಶಾಸನವು ಉಲ್ಲೇಖಿಸುತ್ತದೆ. ಹೊಸೂರು ಕ್ರಿ.ಶ.17ನೇ ಶತಮಾನದ ಶಾಸನವು ಸೋವಣ್ಣ ಶೆಟ್ಟಿಯರು ತಮ್ಮ ಮಾತಾಪಿತೃಗಳಿಗೆ ಒಳ್ಳೆಯದಾಗಲಿ ಎಂದು ಮಂಟಪವನ್ನು ಕಟ್ಟಿಸಿ ಹನುಮನನ್ನು ಪ್ರತಿಷ್ಠಾಪಿಸಿ ಆ ದೇವರ ನೈವೇದ್ಯಕ್ಕೆ, ಪೂಜೆಗೆ 5 ಕೊಳಗ ಗದ್ದೆಯನ್ನು ದಾನ ಮಾಡಿರುವ ಬಗ್ಗೆ ಶಾಸನವು ತಿಳಿಸುತ್ತದೆ. ಹೊಸೂರು ಕ್ರಿ.ಶ.16ನೇ ಶತಮಾನದ ಶಾಸನವು 10 ಕೊಳಗ ಹೊಲ ಎಂದು ಉಲ್ಲೇಖಿಸುತ್ತದೆ. ಕ್ರಿ.ಶ. 16ನೇ ಶತಮಾನದ ಗುಂಡ್ಲುಪೇಟೆ ಶಾಸನವು ಶ್ರೀಮನ್ ಮಹಾದೇವೊತ್ತಮ ಶ್ರೀ ರಾಮೇಯ ದೇವರಿಗೆ ಚಿಕ್ಕನಂಜೇಯ ಅರಸರು ಹೆಡತಲೆಯ ಮಹಾಧಿರಾಜ ಒಡೆಯರ ಮಕ್ಕಳು ವಿಶ್ವನಾಥ ಒಡೆಯರಿಗೆ ವಿಜಯಪುರದಲ್ಲು 18 ಹೊನ್ನಿಗೆ ಕ್ರಮವಾಗಿ ಒಂದು ಒತ್ತಿನ ನೈವೇದ್ಯಕ್ಕೆ ದಾರೆ ಪೂರ್ವಕವಾಗಿ ಕೊಟ್ಟ ವಿಷಯವನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 16ನೇ ಶತಮಾನದ ಪಡಗೂರು ಶಾಸನವು ಪಡಗೂರಿನ ಹನುಮಂತ ದೇವರಿಗೆ ಶ್ರೀಸಾಳ್ವಗೋವಿಂದ ರಾಜಯ್ಯನವರಿಗೆ ಧರ್ಮವಾಗಲೆಂದು ಸಂಪಿಗೆಪುರ ಮತ್ತು ಬಗುತರಕೆರೆಯನ್ನು ಹನುಮಂತ

ದೇವಾಲಯಕ್ಕೆ 430 ಕಂಬ ಭೂಮಿಯನ್ನು ದತ್ತಿಯಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 16ನೇ ಶತಮಾನದ ಪಂಚನಹಳ್ಳಿ ಶಾಸನವು ಶ್ರೀಮಾನ್ ಮಹಾರಾಆಧಿರಾಜ ಶ್ರೀ ಸಾಳ್ವ ನರಸಿಂಗರಾಯನಿಗೆ ಶ್ರೀ ಅಲ್ಲಾಳ ರಾಮದೇವನು ಭೂಮಿಯ ಒಳಗೆ 308 ರವರೆಯರಿಗೆ ನೀರು ಕೊಂಡ ನಿಮಿತ್ತವಾಗಿ ನಳೂರ ಹೊಲದ ಪಕ್ಕದ ಗದ್ದೆಯಲ್ಲಿ ಕಂಡುಗ 300ಕ್ಕೆ ವ್ಯವಸಾಯದ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. 16ನೆ ಶತಮಾನದ ಪಂಚನಹಳ್ಳಿ ಶಾಸನವು ಪಂಜನಹಳ್ಳಿಯ ಸಿದ್ದೇಗೌಡನ ಮಕ್ಕಳಾದ ಪುಚ್ಚೇವಗೌಡನು ಶ್ರೀಬಸವೇಶ್ವರ ದೇವರಿಗೆ ಹರಕೆಯ ಮಲ್ಲಪ್ಪನಾಮಕರ ಕುಮಾರ ಪೆರುಮನಾಯಕ ಅಯ್ಯನವರು ತಮಗರ ಪುಣ್ಯವಾಗಲೆಂದು ಕೊಟ್ಟ ಕೊಡುಗೆಯನ್ನು ತಿಳಿಸುತ್ತದೆ. ಕ್ರಿ.ಶ. 16ನೆ ಶತಮಾನದ ವೀರನಪುರ ಶಾಸನವು ಕೊಣನೂರಿನ ಬಸವೈಯನ ಮಗನಾದ ವೀರಯ್ಯನಿಗೆ ಪುರ ಎಂಬ ಗ್ರಾಮವನ್ನು ಗುತ್ತಿಗೆಗೆ ಕೊಡಲಾಯಿತೆಂದು ಹೇಳಿದೆ ಜೊತೆಗೆ "ಮರಿಯಾದ" ಎಂದು ನಿಗದಿಯಾದ ಮೊತ್ತವನ್ನು ಸಲ್ಲಿಸಬೇಕಾಗಿದ್ದಿತು. ಎಂಬುದರ ಉಲ್ಲೇಖವಿದ್ದರು ಶಾಸನದ ಪೂರ್ಣ ವಿವರಗಳು ತಿಳಿದು ಬಂದಿಲ್ಲ. ಕ್ರಿ.ಶ. 1638ರ ತೆರಕಣಾಂಬಿ ಶಾಸನವು ಶ್ರೀ ನರಸಿಂಹಸ್ವಾಮಿಯವರ ಅಮೃತೊಡಿಗೆ ಕೊಟ್ಟ ಗ್ರಾಮ ಗೆದೆ, ಬೆದ್ದಲು – ತೋಟ ಮತ್ತು ಶ್ರೀವೀರರಾಜ ಒಡೆಯರು ಬಸವರಾಜೊಡೆಯರ ಉಪನಾಮದಿಂದ ಯೋಗನರಸಿಂಹಸ್ವಾಮಿಯವರಿಗೆ ಕೊಟ್ಟ ಹುಲ್ಲಹಳ್ಳಿಯ ಸ್ಥಳಕ್ಕೆ ಸಲ್ಲುವ ಕಣೆಯಲುನಾಡು ಎಳಗಿನ ದಿಲ್ಲ ಹಳ್ಳಿಯ ಗ್ರಾಮವನ್ನು ಸರ್ವಮಾನ್ಯವಾಗಿ ಬಿಟ್ಟ ಸಂಗತಿಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 1640ರ ತೆರಕಣಾಂಬಿ ಶಾಸನವು ವೆಂಕಟಪ್ಪ ಮಹಾರಾಯನ ಕಾಲದಲ್ಲಿ ಮೈಸೂರು ಅಧಿಪರಸರಾಜಯ್ಯನು ಹಂಗಳ ಸ್ಥಳದ ವೃತ್ತನಪುರ ಗ್ರಾಮವನ್ನು ತೆರಕಣಾಂಬಿ ಹನುಮಂತ ದೇವರ ಪೂಜೆ ಹಾಗೂ ಅನ್ನದಾನ ನಡೆಸುವ ಸತ್ಯಕ್ಕೂ ನೀಡಿದ ವಿಚಾರದ ಉಲ್ಲೇಖವಿದೆ. ಕ್ರಿ.ಶ. 1654ರ ತ್ರಿಯಂಬಕಪುರ ಶಾಸನವು ಬೆಟ್ಟದ ಚಾಮರಾಜನ ಮಾರ್ಗದ ಕಂಠೀರವ ನರಸರಾಜನು ಆಳುತ್ತಿದ್ದಾಗ, ತ್ರಿಯಂಬಕ ಪುರವನ್ನು ಒಳಗೊಂಡ ಸೀಮೆಯ ಅಧಿಕಾರಿಯಾಗಿದ್ದ ಬೊಮ್ಮರಸಯ್ಯನು ಆಗ್ರಾಮದ ಬಾವಿಯೊಂದನ್ನು ಜೀರ್ಣೋದ್ಧಾರಗೊಳಿಸಿದನು. ಈ ಬಾವಿಯನ್ನು ಪುಮಲ್ಲಯ್ಯನ ಆಸ್ಥಾನಿಕ ಶಂಕರಯ್ಯ ಎಂಬುವವನು ತೋಡಿಸಿದ್ದನೆಂಬುದಾಗಿ ಶಾಸನದಲ್ಲಿ ಉಲ್ಲೇಖವಿದೆ. ಕ್ರಿ.ಶ. 1656ರ ಹಂಗಳ ಶಾಸನವು ವಿಜಯನಗರದ 3ನೇ ಶ್ರೀರಂಗರಾಯನ ಕಾಲಕ್ಕೆ ಸೇರಿದ ಶಾಸನದಲ್ಲಿ ಮುರುಳಬಸವಲಿಂಗ ದೇವರಿಗೆ ಹಂಗಳ ಸ್ಥಳದ ವರಕೇರಿ ಬಾಚಳ್ಳಿ ಸಲ್ಲುವ ಚತುಸೀಮೆ ವಳಗನ, ಮನೆವನ, ಜಾತಿದೆರಿಗೆಯನ್ನು ಸರ್ವಮಾನ್ಯ ಮಾಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖಗೊಂಡಿದೆ. ಕ್ರಿ.ಶ. 1665ರ ಲಕ್ಕೂರು ಶಾಸನವು ಸೋಮರಸವೊಡೆಯರ ಪಾತ್ರರಾದ ದೇಪರಾದಾಜವೊಡೆಯರ ಪುತ್ರರಾದ ದೇವರಾಜ ಒಡೆಯರು ಜಯದನ್ನಿಗೋತ್ರದ ಅಶ್ವರಾಯ ಒಣದನ್ನ ಜ್ಯೋತಿಷ್ಯರ ಪುತ್ರರಾದ ಲಕ್ಕಪ್ಪ ಜ್ಯೋತಿಷ್ಯರಿಗೆ ಲಕ್ಕೂರು ಗ್ರಾಮವನ್ನು ದಾನ ಬಿಟ್ಟ

ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1665ರ ದೇಶಿಪುರ ಶಾಸನವು ವೀರವೆಂಕಟಪತಿರಾಯನ ಕಾಲದಲ್ಲಿ ಮೈಸೂರಿನ ಅರಸ ದೇವರಾಜವೊರೆಯರಸ್ಯನವರು ನಂಜನಗೂಡು ತಾಲ್ಲೂಕು ಮಲ್ಲನ ಮೂಲೆಯಲ್ಲಿ ವಿರಕ್ತ ಮಠವನ್ನು ಹೊಸದಾಗಿ ಕಟ್ಟಿಸಿ ವಿರಕ್ತ ಸ್ವಾಮಿಯವರಾದ ಪ್ರರಣಮಪ್ಪ ಚೆನ್ನವೀರ ದೇವರಾಯವೊಡೆಯರಿಗೆ ದೇಶಿಪುರ ಹಾಗೂ ಹೂಕುಂದ ಗ್ರಾಮಗಳನ್ನು ದಾನ ಬಿಟ್ಟವನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 1829ರ ಕೆಲಸೂರು ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರು ಕೆಲಸೂರಿನ ಸರ್ವಾಲೋಕಾಶ್ರಯ ಬಸದಿಯ ಜೀರ್ಣೋದ್ಧಾರ ಮಾಡಿಸಿ, ವಿಜಯ ಮತ್ತು ಜ್ವಾಲಾಮಾಲಿನಿಯ ಪ್ರತಿಷ್ಠಾಪನೆ ಮಾಡಿಸಿರುವುದು ಉಲ್ಲೇಖಗೊಂಡಿದೆ. 16ನೇ ಶತಮಾನಕ್ಕೆ ಸೇರಿದ ಹೆಗ್ಗೊಠಾರದ ಶಾಸನವು ಪ್ರಭು ಬಾಲಕೃಷ್ಣದೇವರ ಆದೇಶದಂತೆ ನಂಬಿಯರ ಅಂಕಪ್ಪಯನವರು ಹೆಗ್ಗೊಠಾರದ ಮಲಿಂಗ್ಯೆಯಗೆ ಹೆಗ್ಗೊಠಾರಕ್ಕೆ ಸಲುವ ಪುರವನ್ನು ಮೂರು ವರ್ಷಗಳಿಗೆ ಗುತ್ತಿಗೆ ನೀಡಿದ ಸ್ವಾರಸ್ಯಕರ ವಿಚಾರವನ್ನು ತಿಳಿಸುತ್ತದೆ.ದುರ್ಮ್ಮಿಖಿಗೆ (ಮೊದಲನೆ ವರ್ಷಕ್ಕೆ) ಎರಡು ಗದ್ಯಾಣಗಳೆಂತಲೂ, ಹೆಮಳಂಭಿಗೆ (ಎರಡನೆಯ ವರ್ಷಕ್ಕೆ) ನಾಲ್ಕು ಗದ್ಯಾಣಗಳೆಂತಲೂ ವಿಳಂಭಿಸಂವತ್ಸರಕ್ಕೆ (ಮೂರನೆಯ ವರ್ಷಕ್ಕೆ) 6 ಗದ್ಯಾಣಗಳೆಂತಲೂ ನಿಗಧಿಪಡಿಸಲಾಯಿತೆಂಬುದು ಶಾಸನದಿಂದ ತಿಳಿದುಬರುತ್ತದೆ.

ಹೀಗೆ ಚಾಮರಾಜನಗರ ಜಿಲ್ಲೆಯಲ್ಲಿ ಕೃಷಿ, ನೀರಾವರಿ, ಗೃಹಕ್ಕೈಗಾರಿಕೆ, ವಾಣಿಜ್ಯ ವ್ಯಾಪಾರ, ಹಣಕಾಸು ನಿರ್ವಹಣೆ ಮುಂತಾದ ಆರ್ಥಿಕ ಚಟುವಟಿಕೆಗಳು ಉತ್ತಮವಾಗಿ ಹಾಗೂ ವ್ಯವಸ್ಥಿತವಾಗಿ ಸಂಘಟನೆಯಾಗಿದ್ದುದರಿಂದ ಆರ್ಥಿಕ ಪ್ರಗತಿಯನ್ನು ಸಾಧಿಸಿ, ಸಾಂಸ್ಕೃತಿಕ ಪರಂಪರೆಯು ವಿಕಾಸಗೊಳ್ಳಲು ಅನುಕೂಲವಾಯಿತು ಎಂಬುದನ್ನು ಕಂಡುಕೊಳ್ಳಬಹುದು.

**ಆಧಾರ ಗ್ರಂಥಗಳು:**

1. ಚಿದಾನಂದಮೂರ್ತಿ.ಎಂ–ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,ಬೆಂಗಳೂರು –2011
2. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–03, 1975, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., ಮೈಸೂರು
3. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–04, 1975, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., ಮೈಸೂರು
4. ಹಯವದನ ರಾವ್,ಸಿ., ಮೈಸೂರು ಗ್ಯಾಸೆಟಿಯರ್, ಸಂಪುಟ–5, ಬೆಂಗಳೂರು, 1930
5. ಕರ್ನಾಟಕ ಪರಂಪರೆ, ಸಂಪುಟ–1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1992.
6. ಮಲಿಯೂರು ಗುರುಸ್ವಾಮಿ, ಹೊನ್ನುಹೊಳೆ ಸ್ಮರಣ (ಸಂ) 2007, ಚಾಮರಾಜನಗರ ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ.